52

**ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಶ್ರೀ ಭೋಜೇಗೌಡ ವಿಧಾನ ಪರಿಷತ್ತಿನ ಸದಸ್ಯರುಗಳಾದ ಇವರು ಮಂಡಿಸಿರುವ ನಿಯಮ-330 ರಡಿಯ ಪ್ರಶ್ನೆಗೆ ಉತ್ತರಿಸುವ ಕುರಿತು.**

**ನಿಯಮ-330:** ಕೃಷಿ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ನಡೆಯುತ್ತಿರುವ ಸಮುದಾಯ ವಿಜ್ಞಾನ ಮಹಾವಿದ್ಯಾಲಯ (Home Science College) ದ ಕಟ್ಟಡ ಸಂಪೂರ್ಣ ಶಿಥಿಲಗೊಂಡು ನಿರುಪಯುಕ್ತವಾಗಿರುವುದರಿಂದ ಬೋಧನಾ / ಪ್ರಯೋಗಾಲಯದ ಚಟುವಟಿಕೆಗಳನ್ನು ಮಾಡಲು ಸಾಕಷ್ಟು ತೊಂದರೆ ಆಗಿರುವುದು.

ಇದಲ್ಲದೆ, ಸಮುದಾಯ ವಿಜ್ಞಾನ (Home Science) ಪಡೆದ ವಿದ್ಯಾರ್ಥಿಗಳಿಗೆ ಮಹಿಳಾ ಮತ್ತು ಮಕ್ಕಳ ಇಲಾಖೆಯ ನೇಮಕಾತಿಗಳಲ್ಲಿ ಆದ್ಯತೆ ನೀಡದಿರುವ ಮತ್ತು KPSC ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯಕ್ರಮದಲ್ಲಿಯೂ ಸೇರ್ಪಡೆ ಮಾಡದೇ ಅನ್ಯಾಯ ಆಗುತ್ತಿರುವ ವಿಷಯವನ್ನು ಪ್ರಸ್ತಾಪಿಸುವುದು.

****

**ಉತ್ತರ:-**

- ಕೃಷಿ ವಿಶ್ವವಿದ್ಯಾಲಯ, ಧಾರವಾಡದ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸ್ವಂತ ಕಟ್ಟಡವು ಸಂಪೂರ್ಣವಾಗಿ ಶಿಥಿಲಗೊಂಡು ನಿರುಪಯುಕ್ತವಾಗಿರುವ ಹಿನ್ನೆಲೆಯಲ್ಲಿ ಸಮುದಾಯ ವಿಜ್ಞಾನ ಮಹಾ ವಿದ್ಯಾಲಯ (Home Science) ಕೃಷಿ ವಿದ್ಯಾಲಯ ಧಾರವಾಡ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

- ಪ್ರಸ್ತುತ ಸಮುದಾಯ ವಿಜ್ಞಾನ ಮಹಾ ವಿದ್ಯಾಲಯ (Home Science)ದ ವಿದ್ಯಾರ್ಥಿಗಳಿಗೆ ಇದ್ದ ಸ್ವಂತ ಕಟ್ಟಡ ಸಂಪೂರ್ಣ ಶಿಥಿಲಗೊಂಡು ನಿರುಪಯುಕ್ತವಾದ ಹಿನ್ನೆಲೆಯಲ್ಲಿ, ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿರುವ ಬೇರೆ ಬೇರೆ ಕಟ್ಟಡಗಳಲ್ಲಿ ಅಗತ್ಯ ಸೌಲಭ್ಯಗಳ ಅಭಾವವಿದ್ದರೂ ಬೋಧನೆ ಹಾಗೂ ಪ್ರಯೋಗಾಲಯ ತರಗತಿಗಳನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಇತರ ವಿಭಾಗಗಳಿಗೆ ತೊಂದರೆಯಾಗದಂತೆ, ಹೊಂದಾಣಿಕೆ ಮಾಡಿಕೊಂಡು ಸಮರ್ಪಕವಾಗಿ ನಡೆಸಲಾಗುತ್ತಿದೆ.

- ಸಮುದಾಯ ವಿಜ್ಞಾನ (Home Science) ಪಡೆದ ವಿದ್ಯಾರ್ಥಿಗಳಿಗೆ ಮಹಿಳಾ ಮತ್ತು ಮಕ್ಕಳ ಇಲಾಖೆಯ ನೇಮಕಾತಿಗಳಲ್ಲಿ ಆದ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ, ಧಾರವಾಡ ಕೃಷಿ ವಿಶ್ವವಿದ್ಯಾಲಯವು ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದ ಮನವಿಯನ್ನು ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

  1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಶೇಷ ಚೇತನರ & ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ವಿವಿಧ ಹುದ್ದೆಗಳ ಮೀಸಲಾತಿ ಅಂದರೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ(CDPO), ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ(ACDPO), ನಿರೂಪಣ ಅಧಿಕಾರಿ(PO) ಮತ್ತು ಮೇಲ್ವಿಚಾರಕರು.

2...

2. ಕರ್ನಾಟಕ ಲೋಕಾಸೇವಾ ಆಯೋಗ (KPSC) ಸೂಚಿಸಿದ ವಿವಿಧ ಹುದ್ದೆಗಳಲ್ಲಿ ಸಮುದಾಯ ವಿಜ್ಞಾನದ ಪಠ್ಯಕ್ರಮದ ಸೇರ್ಪಡೆ.

3. ಹೋಬಳಿ ಮಟ್ಟದಲ್ಲಿ ವೃದ್ಧರ ಆರೈಕೆ ಕೇಂದ್ರಗಳ ಸ್ಥಾಪನೆ ಮತ್ತು ಸಮುದಾಯ ವಿಜ್ಞಾನ ಪದವೀಧರರನ್ನು ಈ ಕೇಂದ್ರಗಳ ಮುಖ್ಯಸ್ಥರನ್ನಾಗಿ ನಾಮನಿರ್ದೇಶನ ಮಾಡುವುದು.

4. ಶಿಶು ಅಭಿವೃದ್ಧಿ ಯೋಜನಾಧಿಕಾರಿ (CDPO) ಗಾಗಿ ಸಮುದಾಯ ವಿಜ್ಞಾನದ ಎಲ್ಲಾ ಐದು ವಿಭಾಗಗಳನ್ನು ಸೇರ್ಪಡೆಗೊಳಿಸುವಂತೆ ಕೋರಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.

**ಸಂಖ್ಯೆ**:AGRI/55/AUD/2025

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು.